ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1685/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಉಮೇಶ್ ಕಾಂಬ್ಳೆ** | | |
| **ತಂದೆಃಹೆಸರು** | **ನಾರಾಯಣ** | **ಪಿಡಬ್ಲ್ಯೂಃ** | **10** |
| **ವಯಸ್ಸು** | **41 ವರ್ಷ** | **ಸಿಡಬ್ಲ್ಯೂಃ** | **23** |
| **ಉದ್ಯೋಗಃ** | **ಪಿ ಐ** | | |
| **ವಾಸ ಸ್ಥಳಃ** | **ಸದರ್ ಬಜಾರ್ ಪೋಲೀಸ್ ಠಾಣೆ, ರಾಯಚೂರು** | | |

**ದಿನಾಂಕ 20-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನಾನು 2021 ರಿಂದ 2022 ರವರೆಗೆ ಸಿಂಧನೂರಿನಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ11-01-2022 ರಂದು ಈ ಪ್ರಕರಣದ ಕಡತವನ್ನು ಚಾಸಾ-22 ರವರಿಂದ ಪಡೆದು ಪರಿಶೀಲಿಸಿದೆನು.

ದಿ.14-01-2022 ರಂದು ಬೆರಳಚ್ಚು ತಜ್ಞರಿಂದ ಒಂದು ಪತ್ರ ಬಂದಿದ್ದು, ಅದರಲ್ಲಿ ಸದರಿ ಆಸಾಮಿಯ ಬೆರಳಚ್ಚು ಕೌಲ್ ಬಜಾರ್ ಪೋ.ಠಾ. ಕ್ರೈಂ ನಂ. 1/2017 ರಲ್ಲಿ ಈಗಾಗಲೇ ದಸ್ತಗಿರಿ ಆದ ಆರೋಪಿಯ ಬೆರಳಚ್ಚಿಗೆ ಹೊಂದಾಣಿಕೆ ಆಗುತ್ತದೆ ಎಂದು ಬಂದಿತ್ತು. ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಅನುಬಂಧ-2 & ಸರ್ಚ್ ಸ್ಲಿಪ್ಪನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-32 & 33 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-32 ಎ & 33 ಎ ಎಂದು ಗುರುತಿಸಲಾಯಿತು.

ನಂತರ ಪಿ ಎಸ್ ಐ ರವರಿಗೆ ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ತಂದು ಹಾಜರುಪಡಿಸುವಂತೆ ನೇಮಿಸಿರುತ್ತೇನೆ. ದಿ.17-01-2022 ರಂದು ಬೆ.8 ಗಂಟೆಗೆ 1ನೇ ಆರೋಪಿಯನ್ನು ಪಿ ಎಸ್ ಐ & ಸಿಬ್ಬಂದಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿಯವನ ವಿಚಾರಣೆ ಮಾಡಿ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ. 1 ಆರೋಪಿಯ ಸ್ವಖುಷಿ ಹೇಳಿಕೆಗಳನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34 ಎ ಎಂದು ಗುರುತಿಸಲಾಯಿತು. ನಿಪಿ-34 ರ ಕೊನೆಯ ಪ್ಯಾರಾವನ್ನು ನಿಪಿ-34 ಬಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಆತ ಬಂಗಾರದ ಆಭರಣಗಳನ್ನು ಹಾಜರುಪಡಿಸಿದ್ದು, ನಂತರ ಸದರಿ ಬಂಗಾರದ ಆಭರಣಗಳ ಜಪ್ತು ಪಂಚನಾಮೆಯನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದಿರುತ್ತೇನೆ. ಸಾಕ್ಷಿಯು ನಿಪಿ-16 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-9 ರಿಂದ 11 ರಲ್ಲಿರುವ ಫೋಟೋದಲ್ಲಿನ ಆಭರಣಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-9 ಎ ಯಿಂದ 11 ಎ ಎಂದು ಗುರುತಿಸಲಾಯಿತು.

1ನೇ ಆರೋಪಿ ತಾನು ಕಳ್ಳತನ ಮಾಡಿದ ಮನೆಯನ್ನು ತೋರಿಸುವುದಾಗಿ ತಿಳಿಸಿದ್ದು, ಪಂಚರಾದ ಚಾಸಾ-4 & 5 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಆ ಕಾಲಕ್ಕೆ ನಿಪಿ-17 ನ್ನು ತೆಗೆದಿದ್ದೆ. ನಿಪಿ-17 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-17 ಎ ಎಂದು ಗುರುತಿಸಲಾಯಿತು.

ನಂತರ ಚಾಸಾ-1, 7 ರಿಂದ 10 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. 1ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಚಾಸಾ-11, 13 ರಿಂದ 16 ರವರ ಹೇಳಿಕೆ ಪಡೆದಿರುತ್ತೇನೆ.

ದಿ.19-01-2022 ರಂದು 2 & 3ನೇ ಆರೋಪಿತರನ್ನು ಪಿ ಎಸ್ ಐ & ಸಿಬ್ಬಂದಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿಯವರನ್ನು ವಿಚಾರಣೆ ಮಾಡಿ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ. 2 & 3ನೇ ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ನಿಪಿ-35 & 36 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35 ಎ & 36 ಎ ಎಂದು ಗುರುತಿಸಲಾಯಿತು. ನಿಪಿ-35 & 36 ರ ಕೊನೆಯ ಪ್ಯಾರಾವನ್ನು ನಿಪಿ-35 ಬಿ & 36 ಬಿ ಎಂದು ಗುರುತಿಸಲಾಯಿತು. ಅವರು ಕಾಲಕ್ಕೆ ಕೆಲವೊಂದು ಬಂಗಾರದ ಆಭರಣಗಳನ್ನು ಹಾಜರುಪಡಿಸಿದ್ದು, ನಂತರ ಸದರಿ ಬಂಗಾರದ ಆಭರಣಗಳ ಜಪ್ತು ಪಂಚನಾಮೆಯನ್ನು ಪಂಚರ ಸಮಕ್ಷಮ ನಿಪಿ-18 ರಂತೆ ಪಂಚನಾಮೆ ಮಾಡಿ ವಶಕ್ಕೆ ಪಡೆದಿರುತ್ತೇನೆ. ಸಾಕ್ಷಿಯು ನಿಪಿ-18 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-18 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-12 ರಿಂದ 14 ರಲ್ಲಿರುವ

ಫೋಟೋದಲ್ಲಿನ ಆಭರಣಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-12 ಎ ಯಿಂದ 14 ಎ ಎಂದು ಗುರುತಿಸಲಾಯಿತು.

2 ನೇ ಆರೋಪಿತರು ತಾವು ಕಳ್ಳತನ ಮಾಡಿದ ಮನೆಯನ್ನು ತೋರಿಸುವುದಾಗಿ ತಿಳಿಸಿದ್ದು, ಪಂಚರಾದ ಚಾಸಾ-4 & 6 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಆ ಕಾಲಕ್ಕೆ ನಿಪಿ-19 ನ್ನು ತೆಗೆದಿದ್ದೆ. ನಿಪಿ-19 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-19 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-20 ರಲ್ಲಿನ ತನ್ನ ಫೋಟೋವನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನ ನಿಪಿ-20 ಎ ಎಂದು ಗುರುತಿಸಲಾಯಿತು. ನಂತರ ಚಾಸಾ-1, 7 ರಿಂದ 10 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. 2 & 3 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಚಾಸಾ-11, 13 ರಿಂದ 16 ರವರ ಹೇಳಿಕೆ ಪಡೆದಿರುತ್ತೇನೆ.

ದಿ.26-01-2022 ರಂದು ಬಳ್ಳಾರಿ ಕೌಲ್ ಬಜಾರ್ & ಗ್ರಾಮೀಣ ಠಾಣೆಯಿಂದ ಸದರಿ ಆರೋಪಿತರ ವಿರುದ್ಧ ಆದ ಪ್ರಕರಣಗಳ ಮಾಹಿತಿ ಪಡೆದಿರುತ್ತೇನೆ. ಸಾಕ್ಷಿಯು ಕೌಲ್ ಬಜಾರ್ ಮೊ.ಸಂ.1/2017 ರ ಪ್ರ..ವ ವರದಿ & ಅಂತಿಮ ವರದಿಗಳ ದೃಢೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ-37 & 38** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-37 ಎ & 38 ಎ ಎಂದು ಗುರುತಿಸಲಾಯಿತು.

ಬಂಗಾರದ ಆಭರಣಗಳ ಜಪ್ತು ಪಂಚನಾಮೆ ಆದ ನಂತರ ಸ್ವತ್ತುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸ್ವತ್ತುಪಟ್ಟಿಗಳನ್ನು & ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ವತ್ತುಪಟ್ಟಿಗಳನ್ನು **ನಿಪಿ-39 & 40** ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-39 ಎ & 40 ಎ ಎಂದು ಗುರುತಿಸಲಾಯಿತು.

ದಿ.01-03-2022 ರಂದು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕವರನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 6 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1 & 2 ನೇ ಆರೋಪಿತರ ಪರ ವಕೀಲರಿಂದಃ**

1. ನ್ಯಾಯಾಲಯದ ಮುಂದಿರುವ 3 ಜನ ಆರೋಪಿತರನ್ನು ನೋಡಿ ಅವರ ಹೆಸರುಗಳನ್ನು ಹೇಳುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಟೀ ಶರ್ಟ್, ನೀಲಿ ಲುಂಗಿ

ಉಟ್ಟುಕೊಂಡ ವರು 2ನೇ ಆರೋಪಿ ಜಿಲಾನಿ, ಮಧ್ಯದಲ್ಲಿ ಕುಳಿತ ಆರೋಪಿ ಅನ್ವರ್, ಕೊನೆಗೆ ಹಸಿರು ಬಣ್ಣದ ಶರ್ಟ್ ಹಾಕಿರುವ ವ್ಯಕ್ತಿ ನೂರುಲ್ಲಾ ಎಂದು ನೋಡಿ ಗುರುತಿಸಿರುತ್ತಾರೆ.

2. ನಾನು ಕಡತ ವಹಿಸಿಕೊಂಡ ನಂತರ ದಿ.17-01-2022 ರಂದು ಘಟನಾ ಸ್ಥಳಕ್ಕೆ ಹೋಗಿದ್ದೆ. ದಿ.11 ರಿಂದ ದಿ.17 ರವರಗೆ ನೀವು ಯಾವುದೇ ರೀತಿಯ ತನಿಖೆ ಈ ಪ್ರಕರಣದಲ್ಲಿ ಮಾಡಿಲ್ಲ ಎಂದರೆ ಸರಿ.

3. ಈ ಪ್ರಕರಣದಲ್ಲಿ ಶ್ವಾನದಳ ಬಂದಿತ್ತು. ಶ್ವಾನದಳದ ಮುಖ್ಯಸ್ಥರ ಹೇಳಿಕೆಯನ್ನು ನಾನು ಪಡೆದಿಲ್ಲ. ಬೆರಳಚ್ಚಿಗೋಸ್ಕರ ನಾನು ಮೊದಲು ಅಪರಾಧ ಸ್ಥಳದ ಪರೀಕ್ಷಾ ವರದಿ, ಆಕಸ್ಮಿಕ ಬೆರಳು ಮುದ್ರೆಯ ಪರೀಕ್ಷೋತ್ತರ ಪ್ರ.ಪತ್ರ ಪಡೆದಿದ್ದೆ. ಸದರಿ ಮುದ್ರೆಯ ಭಾವಚಿತ್ರಗಳನ್ನು ನಾನು ಸ್ವೀಕರಿಸಿಲ್ಲ. ಸದರಿ ಬೆರಳಚ್ಚನ್ನು ನಾನು ತಾಳೆ ಮಾಡಿ ನೋಡಿಲ್ಲ. ಬೆರಳಚ್ಚು ತಜ್ಞರ ಹೇಳಿಕೆಯನ್ನು ನಾನು ಪಡೆದಿಲ್ಲ.

4. ಆರೋಪಿತರ ದಸ್ತಗಿರಿಗೆ ಸಂಬಂಧಿಸಿದ ಬಗ್ಗೆ ಸಂಬಂಧಿಕರಿಗೆ ಮಾಹಿತಿ ನೀಡಿದ ದಾಖಲೆಯನ್ನು ನಾನು ಅಂತಿಮವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ದಿ.17-01-2021 ರಂದು ಪಡೆದ ಸ್ವಖುಷಿ ಹೇಳಿಕೆಯ ಕಾಲಕ್ಕೆ ಖಾಲಿ ಹಾಳೆಯ ಮೇಲೆ ಆರೋಪಿಯ ಹೇಳಿಕೆ ಪಡೆದು, ನಂತರ ಹೇಳಿಕೆಯನ್ನು ಪ್ರಿಂಟ್ ಮಾಡಲಾಗಿದೆ ಎಂದರೆ ಸರಿಯಲ್ಲ.

6. ಆರೋಪಿತರು ಆಭರಣಗಳನ್ನು ಹಾಜರುಪಡಿಸದ ಕಾಲಕ್ಕೆ ವೀಡಿಯೋವನ್ನು ಮಾಡಿಲ್ಲ & ಫೋಟೋವನ್ನು ತೆಗೆದಿಲ್ಲ ಎಂದರೆ ಸರಿ. ಚಾಸಾ-11 ರವರಿಗೆ ಆಭರಣ ಪರೀಕ್ಷೆ ಮಾಡುವ ಯೋಗ್ಯತೆ ಇದೆ ಎಂದು ನೋಡಲು ದಾಖಲೆ ಪಡೆದಿಲ್ಲ. ಅವರು ಯಾವುದರ ಪರಿಣಿತರು & ಯಾವ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆಂದೂ ಸಹ ದಾಖಲೆ ಪಡೆದಿಲ್ಲ. ಆಭರಣಗಳು ಬಂಗಾರದ್ದು ಇತ್ತು ಎಂದು ಅವರಿಂದ ಬಂಗಾರದ ಪ್ರ.ಪತ್ರ ಪಡೆದಿಲ್ಲ. ಸದರಿ ಆಭರಣ ಯಾವ ಕ್ಯಾರೆಟ್ ನದು ಇತ್ತು ಎಂದು ದಾಖಲೆ ಪಡೆದಿಲ್ಲ.

7. 2018 ರಿಂದ ಚಾಸಾ-11 ರವರನ್ನು ನಿಮ್ಮ ಠಾಣೆಯ ಈ ರೀತಿಯ ಪ್ರಕರಣಗಳಲ್ಲಿ ಖಾಯಂ ಆಗಿ ಪರಿಶೋಧಕರನ್ನಾಗಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ನಗರ ಠಾಣೆಯ ಸಿಸಿ ನಂ.808 & 809 ರಲ್ಲಿ ಅವರನ್ನೇ ಪರಿಶೋಧಕರನ್ನಾಗಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ವರದಿ ನೀಡುತ್ತಾರೆಂದು ಚಾಸಾ-11 ರವರಿಂದ ಆಭರಣದ ಪರೀಕ್ಷೆ ಮಾಡಿಸಿದ್ದೀರಿ ಎಂದರೆ ಸರಿಯಲ್ಲ.

8. ನಿಪಿ-15 ರಲ್ಲಿರುವ ನಕಾಶೆಯನ್ನು ನಮ್ಮ ಸಿಬ್ಬಂದಿ ಶಿವಲಿಂಗಪ್ಪ ಬರೆದಿದ್ದರು. ಸದರಿ ನಕಾಶೆಯಲ್ಲಿ ಶಿವಲಿಂಗಪ್ಪರವರ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-15 ರ 8 ನೇ ಕಂಡಿಕೆಯಲ್ಲಿ ಬರೆದ ಮನೆಯ ಸಂಖೆಯನ್ನು ನಮೂದಿಸಿಲ್ಲ ಎಂದರೆ ಸರಿ. ಪಂಚನಾಮೆಯ ಕಾಲಕ್ಕೆ ಭೌತಿಕ ವಸ್ತುಗಳನ್ನು ಜಪ್ತಿ ಮಾಡಿಲ್ಲ.

9. ಚಾಸಾ-4 & 5 ರವರು ನಿಮ್ಮ ಠಾಣೆಯ ಖಾಯಂ ಪಂಚರು, ಆದ್ದರಿಂದ ಈ ಪ್ರಕರಣದ ಎಲ್ಲಾ ಪಂಚನಾಮೆಗಳಿಗೂ ಅವರನ್ನೇ ಪಂಚರನ್ನಾಗಿ ಮಾಡಿದ್ದೀರಿ ಎಂದರೆ ಸರಿಯಲ್ಲ.

10. ನಿಪಿ-16 ರಲ್ಲಿ 5 ಮಾದರಿಯ ಆಭರಣಗಳಿವೆ ಎಂದರೆ ಸರಿ. ಸದರಿ ಆಭರಣಗಳನ್ನು ಮಾಲೀಕರಿಗೆ ವರ್ಗಾಯಿಸಲು ಸಂಬಂಧಿಸಿದ ಮಾಲೀಕರಿಂದ ದಾಖಲೆಗಳನ್ನು ಪಡೆದಿಲ್ಲ. ಸಾಕ್ಷಿಗೆ ಮು ಮಾ 6 ನ್ನು ತೋರಿಸಿ ಅದರ ಒಳಗಡೆ ಭಾರದ ವಸ್ತುಗಳನ್ನು ಹಾಕಿದಾಗ ರಂಧ್ರ ಬೀಳುವ ಸಾಧ್ಯತೆ ಇದೆ, ಆ ರೀತಿ ಗುರುತುಗಳು ಇಲ್ಲ ಎಂದರೆ ಸರಿ. ಅದರ ಲಕೋಟೆಯ ಮೇಲೆ ಪಂಚರ & ನಿಮ್ಮ ಸಹಿ ಇಲ್ಲ ಎಂದರೆ ಸರಿ. ನೀವು ತರಾತುರಿಯಲ್ಲಿ ಅಂತಿಮವರದಿ ಸಲ್ಲಿಸುವ ಸಲುವಾಗಿ ಇವೆಲ್ಲವನ್ನೂ ನೀವೇ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

11. ಸಾಕ್ಷಿಗೆ ಕಡತದಲ್ಲಿರುವ ಕೀಲಿ ಪತ್ರವನ್ನು ತೋರಿಸಿ, ಅದು ತುಕ್ಕು ಹಿಡಿದಿರುವ & ಬಳಕೆ ಇಲ್ಲದ ವಸ್ತು ಎಂದರೆ ಸರಿಯಲ್ಲ. ಗಟ್ಟಿಯಾದ ವಸ್ತುವಿನಿಂದ ಅದರ ಮೇಲೆ ಹೊಡೆದರೆ ಈ ರೀತಿ ಚಿಕ್ಕ ಗುರುತು ಇರುವುದಿಲ್ಲ ಎಂದರೆ ಅದನ್ನು ಮೀಟಿ ತೆಗೆದಿದ್ದಾರೆ, ಹೊಡೆದು ತೆಗೆದಿಲ್ಲ, ಆದ್ದರಿಂದ ಮೀಟಿ ತೆಗೆದ ಗುರುತು ಇದೆ ಎನ್ನುತ್ತಾರೆ. ಅದನ್ನು ಮೀಟಿ ತೆಗೆದ ವಸ್ತುವನ್ನು ನಾನು ಜಪ್ತಿಪಡಿಸಿಕೊಂಡಿಲ್ಲ.

12. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಚಿಲಕದ ಕೊಂಡಿಯನ್ನು ತೋರಿಸಿ, ಅದು ಮುರಿದು ಹೋಗಿದೆ ಎಂದರೆ ಸರಿ. ಸದರಿ ಎರಡೂ ವಸ್ತುಗಳನ್ನು ಬಲವಂತವಾಗಿ ತೆಗೆದಂತಿಲ್ಲ, ಸೂಕ್ಷ್ಮವಾಗಿ ತೆಗೆದಂತಿದೆ ಎಂದರೆ ಸರಿಯಲ್ಲ. ಬಲವಂತವಾಗಿ ತೆಗೆದರೆ ಅದರಲ್ಲಿರುವ ಪ್ಲಾಸ್ಟಿಕ್ ರಬ್ಬರ್ ಕಟ್ ಆಗುತ್ತದೆ ಎಂದರೆ ಸರಿಯಲ್ಲ. ಸದರಿ ವಸ್ತುಗಳು ಬಿದ್ದ ಜಾಗದ ಭಾವ ಚಿತ್ರವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದ ವಸ್ತುಗಳು ನಿಪಿ-6 ರಲ್ಲಿವೆ, ಅವು ಮುರಿದಿಲ್ಲ & ಬಿದ್ದಿಲ್ಲ, ನಿಪಿ-6 ರಲ್ಲಿಯೇ ಭಾಗಕ್ಕೆ ಹೊಂದಿಕೊಂಡಿವೆ ಎಂದರೆ ಸರಿ. ನೀವು ಹಾಜರುಪಡಿಸಿರುವ ಕೊಂಡಿಗೆ ಪತ್ತ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ.

13. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಚಿಲಕದ ಮುರಿದ ಭಾಗವನ್ನು ಜೋಡಿಸಿದಂತೆ ತೋರಿಸಿ, ಇದಕ್ಕೆ ಪತ್ತ ಹಾಕಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಕಬ್ಬಿಣದ ಗ್ರಿಲ್ ಗೆ ಹಾಕಿದ ಪತ್ತ, ಆದರೆ ಚಿಲಕಕ್ಕೆ ಅಲ್ಲ ಎನ್ನುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಚಿಲಕದ ಮುರಿದ

ಭಾಗವನ್ನು ತೋರಿಸಿ, ಅದನ್ನು ಇನ್ನರ್ ಲಾಕ್ ಎನ್ನುತ್ತಾರೆ, ಅದಕ್ಕೆ ಪತ್ತ ಹಾಕಲು ಬರುವುದಿಲ್ಲ ಎಂದರೆ ಸರಿ.

15. ಸಾಕ್ಷಿಗೆ ನಿಪಿ- ರ ಫೋಟೋವನ್ನು ತೋರಿಸಿ, ಅದಕ್ಕೆ ಮುಖ್ಯ ದ್ವಾರ, ಅದರ ನಂತರ ಮೆಸ್ ಬಾಗಿಲು ಇತ್ತು, ಅದನ್ನು ನೀವು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಕಬ್ಬಿಣದ ಗ್ರಿಲ್ ಆದ ನಂತರ ಇರುವ ಬಾಗಿಲೇ ಮುಖ್ಯ ಬಾಗಿಲು ಎನ್ನುತ್ತಾರೆ. ನೀವು ಹೇಳಿದಂತೆ ಗ್ರಿಲ್‌ನ್ನು ಮುರಿದರೆ ಈ ರೀತಿ ಚಿಲಕ ಮುರಿಯುವುದಿಲ್ಲ ಎಂದರೆ ಸರಿಯಲ್ಲ.

16. ಈ ಪ್ರಕರಣಕ್ಕೆ ಬೇಕಾದ ಮನೆಯ ಚಿತ್ರವನ್ನು ನೀವು ತೆಗೆದಿಲ್ಲ ಎಂದರೆ ಸರಿ. ನಿಮ್ಮ ಪ್ರಕರಣಕ್ಕೆ ಅನುಕೂಲವಾಗುವಂತೆ ಯಾವುದೋ ಒಂದು ಮನೆಯ ಒಳಗಿನ ಫೋಟೋವನ್ನು ತೆಗೆದಿದ್ದೀರಿ, ಅವು ಘಟನಾ ಸ್ಥಳದ ಫೋಟೋಗಳಲ್ಲ ಎಂದರೆ ಸರಿಯಲ್ಲ.

17. ಮಾಲೀಕರಿಂದ ಆಭರಗಳನ್ನು ಗುರುತು ಕವಾಯತ್ತು ಮಾಡಿರುತ್ತೇನೆ. ಆರೋಪಿತರು ಹಾಜರುಪಡಿಸಿದ ದಿನವೇ ಮಾಲೀಕರನ್ನು ಕರೆಸಿದ್ದೆ. ಆ ಕಾಲಕ್ಕೆ ವೀಡಿಯೋ & ಫೋಟೋವನ್ನು ತೆಗೆದಿಲ್ಲ.

18. ಈ ದಿನ ನಿಮಗೆ 1 ನೇ ಆರೋಪಿ ಯಾವ ಯಾವ ಆಭರಣಗಳನ್ನು ಹಾಜರುಪಡಿಸಿದ್ದ & 2 ನೇ ಆರೋಪಿ ಯಾವ ಯಾವ ಆಭರಣಗಳನ್ನು ಹಾಜರುಪಡಿಸಿದ್ದ ಎಂದು ಕಡತವನ್ನು ನೋಡದೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ತುಂಬಾ ವರ್ಷಗಳಾಗಿದ್ದರಿಂದ ಸದ್ಯ ನೆನಪಿಲ್ಲ ಎನ್ನುತ್ತಾರೆ.

19. ನೀವು ಹೇಳಿದಂತೆ ಆರೋಪಿತರಿಗೂ ಈ ಕೇಸಿನಲ್ಲಿರುವ ಘಟನೆಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ, ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ತನಿಖೆ ಮಾಡಿ, ಆರೋಪಿತರ ತಪ್ಪು ಇಲ್ಲದೇ ಇದ್ದರೂ ಸಹ ದೂರುದಾರರ ಮಾತು ಕೇಳಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**